ಹಾಸನ ಜಿಲ್ಲೆಯ ಕೊಣನೂರನ್ನು ತಲುಪುತ್ತದೆ. ಆ ಬಸ್ಸಿಗಾಗಿ ಚಳಿಯ ಮಧ್ಯೆ ತಮ್ಮ ಸೀರೆಯನ್ನು ಮೈಪೂರ್ತಿ ಹೊದ್ದು, ನಿದ್ದೆಗಣ್ಣಿನಲ್ಲಿ ಕಾಯುತ್ತಾ ಕುಳಿತ ಮಹಿಳೆಯರ ಗುಂಪನ್ನು ಕಾಣಬಹುದು. ತಮ್ಮ ಹಳ್ಳಿಗಳಲ್ಲಿ ಬೆಳೆದ ಸೊಪ್ಪು, ಹೂವನ್ನು ಬುಟ್ಟಿಯಲ್ಲಿ ಗಂಟುಕಟ್ಟಿ ಬಸ್ಸಿನೊಳಗೆ ತುರುಕಿದಾಗ ಎಂತಹಾ ನಿದ್ದೆಯಲ್ಲಿದ್ದವನೂ ಹೂಗಳ ಪರಿಮಳಕ್ಕೆ ಎಚ್ಚರಗೊಳ್ಳಲೇಬೇಕು. ಹೂವಿನ ಲೋಡಿಂಗ್‌ಗಾಗಿ ಬಸ್ಸು ಅರ್ಧ ಗಂಟೆ ಕೊಣನೂರಿನಲ್ಲಿ ನಿಂತು, ಐದು ಗಂಟೆಯ ಹೊತ್ತಿಗೆ ಮಡಿಕೇರಿ ತಲುಪುತ್ತದೆ. ಅಲ್ಲಿಂದ ಹೂ ಮಾರುವ ಮಹಿಳೆಯರು ಪ್ರತ್ಯೇಕವಾಗಿ ಕೊಡಗಿನ ಹಳ್ಳಿಗಳನ್ನು, ಸಂತೆಗಳನ್ನೂ ತಲುಪುತ್ತಾರೆ. ಮಳೆ, ಚಳಿ, ಗಾಳಿ, ಬಿಸಿಲು ಯಾವುದನ್ನೂ ಲೆಕ್ಕಿಸದೇ ಒಂದೇ ಸ್ವರದಲ್ಲಿ 'ಹೂವೇ... ಹೂವೇ...' ಎಂದು ಸುಮಧುರವಾಗಿ ಕೂಗುವ ಆ ಧ್ವನಿಗೂ ಅವಳು ಕೊಡುವ ಮಲ್ಲಿಗೆ ಪರಿಮಳಕ್ಕೂ ನಾನು ಅಭಿಮಾನಿ.

ಇನ್ನೂ ಹಸುರು ಬಣ್ಣದ ಶಾಯಿಯಂತಹ ವಸ್ತುಗಳನ್ನಿಟ್ಟುಕೊಂಡು ಸೌಂದರ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಸಂತೆಗಳಲ್ಲಿ, ಜಾತ್ರೆಗಳಲ್ಲಿ ಹಚ್ಚೆ ಹಾಕುವವರನ್ನು ಕಾಣಬಹುದು. ಮಹಿಳೆಯರು ತಮ್ಮ ಹಣೆಯ ಮೇಲೆ ಬೊಟ್ಟಿನಂತೆ ಮೂರು ಚುಕ್ಕಿಗಳನ್ನು ಹಾಕಿಸುವುದು, ತಾಯಿಯ, ಮಡದಿಯ, ಗಂಡನ, ಮನೆದೇವರ ಹೆಸರುಗಳನ್ನು, ಧಾರ್ಮಿಕ ಸಂಕೇತಗಳನ್ನು ಕೈಮೇಲೆ, ಎದೆಯ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದನ್ನು ಕಾಣಬಹುದಾಗಿತ್ತು. ಹಚ್ಚೆ ಶಾಶ್ವತವಾಗಿ ಚರ್ಮದಲ್ಲಿ ಉಳಿದುಬಿಡುವ, ಹಾಕುವಾಗ ಸೂಜಿಯಿಂದ ಚುಚ್ಚುವ ಕಾರಣ ನೋವಿನ ಜೊತೆಗೆ ಎರಡುಮೂರು ದಿನ ಜ್ವರ ಬರುವ ಸಾಧ್ಯತೆಯೂ ಇದೆ. ಬಳಸಿದ ಸೂಜಿಯನ್ನೇ ಮತ್ತೆಮತ್ತೆ ಬಳಸುವುದರಿಂದ ರೋಗಗಳು ಬರಬಹುದು. ಆದರೆ ಇಂದು ಹಚ್ಚೆ ಹಾಕುವ ಕಾಯಕ ವೃತ್ತಿಪರವಾಗಿ ಟ್ಯಾಟೂ ಕಲ್ಚರ್‌ಗೆ ಪರಿವರ್ತನೆಗೊಂಡಿದೆ. ಆಧುನಿಕ ತಂತ್ರಜ್ಞಾನ ಬಳಸಿ ಅಡಿಯಿಂದ ಮುಡಿಯವರೆಗೆ, ಗಂಡು ಹೆಣ್ಣೆಂಬ ಭೇದವಿಲ್ಲದೆ, ತಮ್ಮ ವೈಯಕ್ತಿಕ ಅಂಗಕ್ಕೂ ಟ್ಯಾಟುಗಳನ್ನು ಹಾಕಿಸುವುದು ವ್ಯಾಪಕವಾಗಿದೆ. ಹಚ್ಚೆ ಹಾಕಿಸುವುದು ಇಲ್ಲವೇ ಇಲ್ಲ ಎನ್ನಿಸುವಷ್ಟರಮಟ್ಟಿಗೆ ಕಣ್ಮರೆಯಾಗಿದೆ.

ಅದೇ ರೀತಿ ಕೆಂಪು ಮೂತಿಯ ಗಿಳಿಯನ್ನು ಸಣ್ಣದೊಂದು ಬೋನಿನಂತಹ ಪೆಟ್ಟಿಗೆಯಲ್ಲಿ ಹಾಕಿ, ಅದರ ಮುಂದೆ ಒಂದಿಷ್ಟು ಕಾರ್ಡ್‌ಗಳನ್ನು ಜೋಡಿಸಿ ಇಡಲಾಗುತ್ತದೆ. ಜ್ಯೋತಿಷ ಕೇಳಲು ಬಂದ ಜನರಿಗೆ ಗಿಣಿಯ ಮೂಲಕ ಕಾರ್ಡ್ ಎತ್ತಿಕೊಳ್ಳಲು ಜ್ಯೋತಿಷಿಯು ಸೂಚಿಸುತ್ತಾನೆ. ಗಿಣಿ ತನ್ನ ಸ್ವಾಮಿಯ ಆಜ್ಞೆಯನ್ನು ಪಾಲಿಸಿ ಕಾರ್ಡೊಂದನ್ನು ಎತ್ತಿಕೊಡುತ್ತದೆ. ಅಲ್ಲಿ ರಾಮಸೀತೆಯರ ಚಿತ್ರ, ಕೃಷ್ಣನ ಚಿತ್ರಗಳಿರುತ್ತವೆ. ಆ ಚಿತ್ರಗಳಿಗೆ ಪೂರಕವಾಗಿ ಜ್ಯೋತಿಷಿ ಭವಿಷ್ಯ ನುಡಿಯುತ್ತಾನೆ. ತಮಿಳುನಾಡಿನಿಂದ ಬರುವ ಇಂತಹ ಜ್ಯೋತಿಷಿಗಳು ನಮ್ಮೂರ ಸಂತೆಯಲ್ಲಿ ಕಾಣಸಿಗುತ್ತಿದ್ದರು. ಹಸ್ತ ನೋಡಿ, ಮುಖ ನೋಡಿ ಜ್ಯೋತಿಷ ಹೇಳುವವರು ಮಳಿಗೆಗಳಲ್ಲಿ, ಕಟ್ಟಡಗಳಲ್ಲಿ ತಮ್ಮ ಶಾಖೆ ತೆರೆದಿದ್ದಾರೆ. ಮರದಡಿಯಲ್ಲಿ, ಬಯಲಿನಲ್ಲಿ ಕುಳಿತು ಸಾರ್ವಜನಿಕವಾಗಿ ಜ್ಯೋತಿಷ ಹೇಳುವ ಕಾಲ ಮುಗಿಯಿತು.



ನಾನು ಸಂತೆಯಲ್ಲಿ ನೋಡಿದ ಅತ್ಯಂತ ಕೌತುಕದ